ಮಾತನಾಡಿ, ಒಪ್ಪಿಕೊಂಡು ಹೋಗಿದ್ದಾರೆ. ಬಹುಶಃ ಅವರು ಸಮಾಧಾನ ಆಗಿ ಹೋಗಿರಬಹುದು ಎಂದು ನನ್ನ ಅನಿಸಿಕೆ ಆದ್ದರಿಂದ ಈ ಬಗ್ಗೆ ನಿಲುವಳಿ ಸೂಚನೆ ಬೇಕಾಗಿಲ್ಲ ಎಂದು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಉಳಿದ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುತ್ತೇವೆ, ಮುಷ್ಕರ ನಿಲ್ಲಿಸಿ ಎಂದು ತಾವು ಒಂದು ಮಾತು ಹೇಳಿಬಿಡಿ. ನಾನು ತಮ್ಮ ವತಿಯಿಂದ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಎಲ್ಲಾ ನಿನ್ನೆ ಮಾತನಾಡಿದ್ದೇನೆ.

ಕನಕಪುರ ತಾಲ್ಲೂಕಿನಲ್ಲಿ ಆನೆಗಳ ಹಾವಳಿಯಿಂದ ನೊಂದವರಿಗೆ ಪರಿಹಾರ ಕೊಡುವ ಬಗ್ಗೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಉಪಾಧ್ಯಕ್ಷರೆ, ಒಂದು ವಿಷಯವನ್ನು ನಾನು ಅರಣ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಕನಕಪುರ ತಾಲ್ಲೂಕಿನ ಗ್ರಾಮಗಳಿಗೆ ನಿನ್ನೆ ದಿವಸ ಮಧ್ಯಾಹ್ನ ನೂರಾರು ಆನೆಗಳ ಹಿಂಡು ನುಗ್ಗಿವೆ. ವಿಧಾನಸೌಧದಿಂದ ಸುಮಾರು 21 ಕಿ.ಮೀ. ದೂರದಲ್ಲಿ ಕಗ್ಗಲಳ್ಳಿ ಎಂಬಲ್ಲಿ, ಸ್ಟೇಟ್ ಹೈವೇನಲ್ಲಿ ನೂರಾರು ಆನೆಗಳು ಬಂದು ರಸ್ತೆ ಬ್ಲಾಕ್ ಮಾಡಿ ಹಳ್ಳಿಯ ಇಬ್ಬರನ್ನು ಸಾಯಿಸಿದೆ. ಆನೆಗಳ ಹಾವಳಿಯಿಂದ ಹಲವಾರು ಜನರಿಗೆ ಗಾಯಗಳಾಗಿವೆ. ಇಲ್ಲಿಯವರೆಗೆ ಬೆಳಗಿನ ಹೊತ್ತು ಅಥವಾ ಸಂಜೆಯ ಹೊತ್ತು ಆನೆಗಳು ಬರುತ್ತಿದ್ದುವು. ಈಗ ಹಾಡಹಗಲಲ್ಲೇ ಬರುವುದಕ್ಕೆ ಶುರುವಾಗಿದೆ. ಇದಕ್ಕೆ ಮುಖ್ಯವಾದ ಕಾರಣ ಏನೆಂದರೆ, ನ್ಯಾಷನಲ್ ಪಾರ್ಕ್‌ನಲ್ಲಿ ನೂರಾರು ಆನೆಗಳು ಇವೆ. ಅಲ್ಲಿ ನೀರು ಸಿಗದ ಕಾರಣ ಅಥವಾ ಬೇರೆ ಕಾರಣಗಳಿಂದ ನಮ್ಮ ತಾಲ್ಲೂಕಿನ ಕಗ್ಗಲಳ್ಳಿ, ಗಬಾಡಿ ಮುಂತಾದ ಗ್ರಾಮಗಳಿಗೆ ಆನೆಗಳು ನುಗ್ಗಿದ್ದು ಅಲ್ಲಿನ ನೂರಾರು ಜನರು ಭಯಭೀತರಾಗಿದ್ದಾರೆ. ಯಾರು ನಿನ್ನೆ ಮಧ್ಯಾಹ್ನ ಇಬ್ಬರು ಸತ್ತಿದ್ದಾರೆ ಅವರ ಕುಟುಂಬವರ್ಗದವರಿಗೆ ದಯಮಾಡಿ ತಕ್ಷಣ ಪರಿಹಾರವನ್ನು ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಯಾರಿಗೆ ಗಾಯವಾಗಿದೆ ಅವರಿಗೆ ಸ್ವಲ್ಪವಾದರೂ ಪರಿಹಾರ ಕೊಡಬೇಕು. ತೀರ ಬಡವರು, ಕೂಲಿನಾಲಿ ಮಾಡುವವರು, ಗುಡಿಸಿಲಿನಲ್ಲಿರುವವರಿಗೆ ತೊಂದರೆಯಾಗಿದೆ. ಇವರಿಗೆ ಪರಿಹಾರ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ಈಗಲೂ ಆನೆಗಳು ಅಲ್ಲೇ ಇವೆ. ಆದ್ದರಿಂದ ತಕ್ಷಣ ಕನ್ಸರ್‌ವೇಟರ್ ಲೆವೆಲ್‌ನ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಮುಂದೆ ಆನೆಗಳ ಹಾವಳಿ ಆಗದಂತೆ ವ್ಯವಸ್ಥೆ ಮಾಡತಕ್ಕಂಥ ಭರವಸೆಯನ್ನು ಕೊಡಬೇಕು. ತಾವು ಆ ಕೆಲಸಮಾಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಕಾಡುಗಳಿಗೆ ಬೆಂಕಿ ಬಿದ್ದು ಆನೆಗಳು ಬೇರೆ ಬೇರೆ ಕಡೆ ನುಗ್ಗುತ್ತಿವೆ. ಹೀಗೆ ಬೆಂಕಿ ಮುಂದುವರಿದರೆ ಸ್ವಲ್ಪ ದಿವಸದಲ್ಲಿ ಆನೆಗಳು ಬೆಂಗಳೂರಿಗೂ ನುಗ್ಗುತ್ತವೆ. ಕಾರಣ ಏನೆಂದರೆ, ಈಗ ಆನೆಗಳು ಬೆಂಗಳೂರಿನಿಂದ ಕೇವಲ 20 ಕಿ.ದೂರದಲ್ಲಿ ಹಿಂಡು ಹಿಂಡಾಗಿ ಬಂದು ಹಾವಳಿ ನಡೆಸುತ್ತಿವೆ. ಆದ್ದರಿಂದ ಈ ಬಗ್ಗೆ ಸರ್ಕಾರ ಕೂಡಲೇ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಗುರುದೇವ್ : ಮಾನ್ಯ ಅಧ್ಯಕ್ಷರೇ, 6.1.78 ರಲ್ಲಿ ಆಲೂರು ತಾಲ್ಲೂಕು, ಕುಂದೂರು ಹೊಬಳಿಯಲ್ಲಿ ಒಬ್ಬರಿಗೆ ಕಾಡಾನೆ ತುಳಿದಿದ್ದರಿಂದ ಆತ ಮರಣ ಹೊಂದಿದ. ಈ ಬಗ್ಗೆ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಹಾರ ಕೊಡುವ ಬಗ್ಗೆ ಆದೇಶ ಕೊಟ್ಟಿದ್ದರೂ ಕೂಡಾ ಇನ್ನೂವರೆಗೆ ಆತನ ಕುಟುಂಬವರ್ಗದವರಿಗೆ ಪರಿಹಾರ ಸಿಕ್ಕಿರುವುದಿಲ್ಲ. ಕಾಡಾನೆ ಹಾವಳಿ ನಮ್ಮಲ್ಲೂ ಕೂಡಾ ಜಾಸ್ತಿಯಾಗಿದೆ.

ಆದ್ದರಿಂದ ಈ ಬಗ್ಗೆ ಪರಿಹಾರ ಕೊಡುವುದಕ್ಕೆ ಮಂತ್ರಿಗಳು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಹದೇವ್ : ಕನಕಪುರದ ಆನೆಗಳು ಒಂದು ರೀತಿಯವಾದರೆ ನಮ್ಮ ಭಾಗದಲ್ಲಿ ಇರತಕ್ಕ ಆನೆಗಳೇ ಒಂದು ರೀತಿಯವು.

ಉಪಾಧ್ಯಕ್ಷರು : ಅವರು ನೋಟೀಸ್ ಕೊಟ್ಟಿದ್ದರಿಂದ ಅವರಿಗೆ ಅವಕಾಶ ಕೊಟ್ಟಿದ್ದೇನೆ. ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಹದೇವ್ : ಆನೆಗಳ ಹಾವಳಿ ಎಲ್ಲಾ ಕಡೆ ಕಾಮನ್ ಆಗಿದೆ.

ಶ್ರೀ ಎಂ. ಮಹದೇವ್ : ಕಾಡಾನೆಗಳ ಹಾವಳಿಯನ್ನು ತಡೆಯುವುದಕ್ಕೆ ಸರಿಯಾದಂತಹ ವ್ಯವಸ್ಥೆ ಮಾಡಿಲ್ಲ. ತೆಂಗಿನ ಸಸಿಗಳನ್ನು ಕಿತ್ತು ಹಾಕಿದೆ, ಅದಕ್ಕೆ ಪರಿಹಾರ ಕೊಟ್ಟಿಲ್ಲ. ಇದಕ್ಕೆ ಏನಾದರೂ ವ್ಯವಸ್ಥೆ ಮಾಡಬೇಕು.

ಶ್ರೀ ಇ.ಟಿ. ಶಂಬುನಾಥ್ : ಮಾನ್ಯ ಸಿಂಧ್ಯರವರು ಹೇಳಿದಂತಹ ವಿಷಯವನ್ನು ಶೀಘ್ರವಾಗಿ ಪರಿಶೀಲಿಸಿ ಈ ತಕ್ಷಣವೇ 2-3 ದಿವಸ ಅಲ್ಲ, ಈಗಿಂದೀಗಲೇ ವ್ಯವಸ್ಥೆ ಮಾಡಿ ಕಾಡಾನೆಗಳನ್ನು ಒಳಗೆ ಹೋಗಿಸಲಿಕ್ಕೆ ಎಲ್ಲಾ ವ್ಯವಸ್ಥೆ ಮಾಡುತ್ತೇನೆ. ಅವರು ಹೇಳಿದಂತೆ ಸತ್ತವರ ಕುಟುಂಬದವರಿಗೆ ಪರಿಹಾರ ಧನವನ್ನು ನಾಳೆಯೇ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಹಾಗೆಯೇ ಇನ್ನು ಉಳಿದವರಿಗೂ ಕೂಡ ಪರಿಹಾರವನ್ನು ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಯಾರ್ಯಾರಿಗೆ ಪರಿಹಾರ ಬಂದಿಲ್ಲವೆಂದು ಹೇಳುತ್ತಿದ್ದಾರೊ ಅವರೆಲ್ಲರಿಗೂ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಆರ್.ವಿ. ದೇಶಪಾಂಡೆ : ಸಾವಿರಾರು ರೂಪಾಯಿ ಬೆಳೆ ಹಾಳಾಗಿದೆ. ನಮ್ಮ ಜಿಲ್ಲೆಯಲ್ಲಿ ಕೂಡ ಹಾಗೇ ಆಗಿದೆ. ಅಧಿಕಾರಿಗಳು ಪಂಚನಾಮೆ ಮಾಡುತ್ತಾರೆ. ರಿಪೋರ್ಟ್ ಮಾಡುತ್ತಾರೆ. 50 ಸಾವಿರ, 30 ಸಾವಿರ ರೂಪಾಯಿ ಬೆಳೆ ಹಾಳಾಗಿದೆ ಎಂದು ಹೇಳುತ್ತಾರೆ. ಕಡೆಗೆ ಅವರಿಗೆ 500-300 ರೂಪಾಯಿಯನ್ನು ಪರಿಹಾರ ಧನವನ್ನಾಗಿ ಕೊಡುತ್ತೀರಿ. ಇದರ ಬಗ್ಗೆ ಕೇಳಿದರೆ ಬಡ್ಜೆಟಿನಲ್ಲಿ ಪ್ರಾವಿಜನ್ ಇಲ್ಲವೆಂದು ಹೇಳುತ್ತಾರೆ. ನಿಮ್ಮ ವೈಲ್ಡ್ ಲೈಫ್ ಇಲಾಖೆಗೆ ಬಡ್ಜೆಟಿನಲ್ಲಿ ಹೆಚ್ಚಿನ ಪ್ರಾವಿಷ್ ನೀಡಬೇಕು. ಎಲ್ಲಿ ಬೆಳೆ ಹಾಳಾಗುತ್ತದೆ, ಎಲ್ಲಿ ಜನರ ಜೀವಕ್ಕೆ ಅಪಾಯವಾಗುವ ಅಂತಹವರಿಗೆ ಹೆಚ್ಚಿನ ಪ್ರಮಾಣದಲ್ಲಿ ಕಾಂಪನ್‌ಸೇಷನ್ ಕೊಡಲಿಕ್ಕೆ ಪ್ರಾವಿಷ್ ಮಾಡಿಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಇವತ್ತು ತಾಲ್ಲೂಕು ಮಟ್ಟದಲ್ಲಿರತಕ್ಕ ಅಧಿಕಾರಿಗಳು ಪ್ರತಿ ಕುಟುಂಬಕ್ಕೆ ಇಷ್ಟು ರೂಪಾಯಿ ಎಂದು ರೇಟ್ ಫಿಕ್ಸ್ ಮಾಡಿ ಹಣ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು.

ಉಪಾಧ್ಯಕ್ಷರು : ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಒಬ್ಬ ಮಾನ್ಯ ಸದಸ್ಯರು : ನಿನ್ನೆ ಇದರ ಬಗ್ಗೆ ಅಧ್ಯಕ್ಷರ ಗಮನ ಸೆಳೆದಿದ್ದೇನೆ. ಕರ್ನಾಟಕದಲ್ಲಿ 60 ಸಾವಿರ ಪಂಪ್‌ಸೆಟ್ಸ್‌ಗೆ ವಿದ್ಯುಚ್ಛಕ್ತಿ ಕೊಡುತ್ತೇವೆಂದು ಹೇಳಿದ್ದಾರೆ. ಒಂದು ಕುಟುಂಬಕ್ಕೆ 500 ರೂಪಾಯಿ ಕೊಡಬೇಕೆಂದು ಹೇಳಿ ಅಧಿಕಾರಿಗಳು ರೈತರನ್ನು ಶೋಷಣೆ ಮಾಡುತ್ತಿದ್ದಾರೆ ಇಂಜಿನಿಯರ್‌ಗಳು ಮತ್ತು ಅಧಿಕಾರಿಗಳು ಈ ರೀತಿ ಶೋಷಣೆ ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಿ ರೈತರ ಶೋಷಣೆ ತಪ್ಪಿಸಬೇಕು. ರೈತರಿಗೆ ನ್ಯಾಯ ದೊರಕಿಸಿಕೊಡಬೇಕು, ಭ್ರಷ್ಟ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಭೆಯ ಮೂಲಕ ಒತ್ತಾಯ ಮಾಡುತ್ತೇನೆ.

ಪ್ರೊ ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಶಿಕ್ಷಣ ಸಚಿವರಿಗೆ ಸ್ವಲ್ಪ ನೆನಪು ಮಾಡೋಣ ಎಂದು ಇದ್ದೇನೆ. ತಾವು ತಾಂತ್ರಿಕ ಶಿಕ್ಷಣದ ನಿರ್ದೇಶನಾಲಯದ ಬಗ್ಗೆ ಸೋಮವಾರ ಅಥವಾ ಮಂಗಳವಾರ ಹೇಳಿಕೆ ಕೊಡುತ್ತೇನೆಂದು ಹೇಳಿದ್ದೀರಿ. ಅಕೌಂಟೆಂಟ್ ಜನರಲ್‌ರವರ ವರದಿ ನನ್ನ ಕಡೆಗೆ ಬಂದಿದೆ. ತಾವು ಏನು ಕ್ರಮ ಕೈಗೊಳ್ಳುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ಬಗ್ಗೆ ಹೇಳಿಕೆ ತಯಾರಾಗಿ ಸೈಕ್ಲೋಸ್ಟೈಲ್‌ಗೆ ಹೋಗಿದೆ. ಅಲ್ಲಿಂದ ಬಂದ ಕೂಡಲೇ ಇವತ್ತು ಹೇಳಿಕೆ ನೀಡುತ್ತೇನೆ.

ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಮುಚ್ಚಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿನ್ನೆ ದಿನ ಶಿಕ್ಷಣ ಸಚಿವರು ಸದನ ನಡೆಯತಕ್ಕಂತಹ ಕಾಲದಲ್ಲಿ ನಾನು ಮತ್ತು ಬೈರೇಗೌಡರು, ಚಂದ್ರೇಗೌಡರು, ವಾಟಾಳ್ ನಾಗರಾಜ್‌ರವರು ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಮುಚ್ಚಿರತಕ್ಕಂಥ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಗಳು ಅವರನ್ನು ಕರೆದು ಮಾತನಾಡಿ ಒಂದೆರಡು ದಿನಗಳಲ್ಲಿ ಸಮಸ್ಯೆ ಬಗೆಹರಿಸುತ್ತೇನೆಂದು ಈ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದರು. ಇದರ ಪ್ರಗತಿ ಏನಾದರೂ ಆಗಿದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ವಿವರವಾಗಿ ಪರ್ಸನಲ್ ಆಗಿ ಕೂಡ ನಾನು ಅವರೊಂದಿಗೆ ಚರ್ಚೆ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ದಿನೇ ದಿನೇ ಗಂಭೀರವಾದ ಪರಿಸ್ಥಿತಿ ಉಲ್ಬಣವಾಗುತ್ತಿದೆ. ಇದರ ಬಗ್ಗೆ ಗಮನವಿಟ್ಟು ಪರಿಹಾರ ಮಾಡುವುದಾದರೆ ಮಾಡಬೇಕು. ನಿಧಾನ ಮಾಡಿದಷ್ಟೂ ಪರಿಸ್ಥಿತಿ ಅಶಾಂತವಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈಗ ವಿಶ್ವವಿದ್ಯಾನಿಲಯಗಳ ಪರೀಕ್ಷೆಗಳು ಸಮೀಪಿಸುತ್ತಿದೆ. ಅಲ್ಲಿ ಒಂದು ವಾರದಿಂದ ಸತ್ಯಾಗ್ರಹ ನಡೆಸುತ್ತಿದ್ದಾರೆ. ಮಾನ್ಯ ಶಿಕ್ಷಣ ಸಚಿವರು ಹೇಳಿಕೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಈ ವಿಚಾರದಲ್ಲಿ ನಿನ್ನೆ ಹೇಳಿದ ಪ್ರಕಾರ ಸುಮಾರು ಒಂದೂವರೆ ಗಂಟೆಗಳ ಕಾಲ ಶಿಕ್ಷಕರು ಶಿಕ್ಷಕೇತರ ಸಂಘದವರು ವಿದ್ಯಾರ್ಥಿಗಳು ಇವರನ್ನೆಲ್ಲಾ ಕರೆಸಿ ನಾನು ಮತ್ತು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳು ಸಮಾಲೋಚನೆ ಮಾಡಿಯಾದ ಮೇಲೆ ಕುಲಪತಿಗಳಾದ ರಾಜ್ಯಪಾಲರ ಜೊತೆಯಲ್ಲಿ ಕೂಡ ಮಾತುಕತೆ ಮಾಡಿದ್ದೇನೆ. ಕುಲಪತಿಗಳೂ ಕೂಡ ಸಂಬಂಧಪಟ್ಟ ಸಂಘದವರನ್ನು ಕರೆಸಿ ಇವರ ಹತ್ತಿರ ಮಾತನಾಡಿದ್ದಾರೆ. ಉಪಕುಲಪತಿಗಳ ಜೊತೆಯಲ್ಲಿ ಅವರೂ ಮಾತನಾಡಿದ್ದಾರೆ, ನಾನೂ ಮಾತನಾಡಿದ್ದೇನೆ. ಸನ್ಮಾನ್ಯ ಕುಲಪತಿಗಳು ಈ ಬಗ್ಗೆ ಸಂಪೂರ್ಣ ವಿಚಾರ ಮಾಡಿ ನಮ್ಮ ಜೊತೆಯಲ್ಲಿ ಕೆಲವು ವಿಚಾರಗಳನ್ನು ಹೇಳಿದ್ದರು.

12.35 ಪಿ.ಎಂ.

ಇದೆಲ್ಲ ಆದಮೇಲೆ ರಾತ್ರಿ ಪುನಃ ನಾನು ಅವರನ್ನು ಕರೆಸಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ವಿಚಾರಗಳನ್ನು ಮುಂದಿಟ್ಟಾಗ ಅವರು ಉಪಕುಲಪತಿಗಳನ್ನು ಅಮಾನತ್ತಿನಲ್ಲಿಡಬೇಕು ಅಥವಾ ಅವರಿಗೆ ರಜೆಯ ಮೇಲೆ ಹೋಗಲಿಕ್ಕೆ ಹೇಳಬೇಕು ಎಂದು ಹೇಳಿದರು. ಅವರು ಒಂದು ರೀತಿ ಒನ್ ಪಾಯಿಂಟ್ ಪ್ರೋಗ್ರಾಮ್ ಮಾಡಿದಹಾಗೆ ಮಾಡುತ್ತಿದ್ದಾರೆ. ಬಹುಶಃ ಅದು ಸಾಧ್ಯವಾಗುವುದಿಲ್ಲ, ತಮಗೆ ಗೊತ್ತಿದೆ, ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಕೂಡ ಡಿವಿಜನಲ್ ಕಮೀಷನರ್‌ರವರು ವಿಚಾರಣೆ ಮಾಡಿದ್ದಾರೆ. ಅವರು ವರದಿಯನ್ನು ಸಹ ಕೊಟ್ಟಿದ್ದಾರೆ. ಇಲ್ಲಿ ಹಾಗೆ ಮಾಡಿದರೆ ಅಲ್ಲಿಯೂ ಕೂಡ ಅಮಾನತ್ತಿನಲ್ಲಿಡಿಯೆಂದು ಒತ್ತಾಯ ಮಾಡುತ್ತಾರೆ, ಒಂದು ಮೆಮೋರಾಂಡಮ್ ಕೊಟ್ಟ ಕೂಡಲೇ ನಾವು ಉಪಕುಲಪತಿಗಳನ್ನು ಅಮಾನತ್ತಿನಲ್ಲಿಡುವುದಕ್ಕೆ